ಸದಸ್ಯರಾಗಿರುವುದಿಲ್ಲ. ಮಿಶನರಿಗಳು ಹಾಗೂ ಅವರ ಸಹಕಾರಿಗಳು ಉತ್ಸಾಹದಿಂದ ಪ್ರತಿಯೊಬ್ಬ ಬಾಪ್ತಿಸ್ಮಾ ಆದವರಿಗೆ ಕೊಂಚ ಹಣ ಹಾಗೂ ಹೊಸ ಬಟ್ಟೆಗಳನ್ನು ಕೊಡುತ್ತಿದ್ದರು. ಅಷ್ಟೇ ಅಲ್ಲದೆ ಅವರು ಈ ಮಸೀಹಾ ಹೊಸ ಮನೆಯನ್ನೂ ಖರೀದಿಸಿ ಕೊಡುತ್ತಿದ್ದರು.'

ಡಾ|| ಡೇವಿಡ್ ಬಿ.ವ್ಯೆರೆಟ್ ಅವರು ಸಂಪಾದಿಸಿರುವ (ಕ್ರೋಢೀಕರಿಸುವ) ಪುಸ್ತಕ "World Christians Trends AD 30 – AP 2200' ಪ್ರಕಾರ ಭರತ ವರ್ಷದಲ್ಲಿ ಒಂದು ಬಾಪ್ಟಿಸಮ್‌ಗೆ ಸುಮಾರು 9803 ಡಾಲರ್‌ಗಳು ಖರ್ಚಾಗುವುದೆಂದು ತಿಳಿಸಿರುವರು.

ಪ್ರಸಿದ್ಧ ಆರ್ಥಿಕ ತಜ್ಞ ಹಾಗೂ ನೋಬೆಲ್ ಪುರಸ್ಕೃತ ಪ್ರೊ. ಅಮರ್ತ್ಯಸೇನ್‌ರ ಮೂಲಕ ಸಂಕಲಿತ ಪುಸ್ತಕ 'ಭಾರತದಲ್ಲಿ ರಾಜ್ಯಗಳ ವಿಕಾಸ' ಪುಟ 213-14 ರಲ್ಲಿ 'ಕೇರಳದ ವಿಕಾಸದ ಗಳಿಕೆಗಳು'. ಇದರ ಅನುಸಾರ ಮಿಶನರಿಗಳಲ್ಲಿ ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟೆಂಟ್ 2 ಗುಂಪುಗಳಿವೆ. ಆಧುನಿಕ ಶಿಕ್ಷಣದ ಸೂತ್ರದಾರನೆನಿಸಿರುವ ರೋಮನ್ ಕ್ಯಾಥೋಲಿಕ್ ಸಂಸ್ಥೆಯು ಧಾರ್ಮಿಕ ಶಾಲೆಗಳನ್ನು ಪ್ರಾರಂಭ ಮಾಡಿದವು. ಕೆಲ ಭಾಗಗಳಲ್ಲಿ ಮೀನುಗಾರರಿಗೇ ಶಾಲೆಗಳನ್ನು ತೆರೆದಿರುವರು. ಇತಿಹಾಸಕಾರ ಹೆಚ್.ವಾಲ್ಟರ್‌ರ ಅಭಿಪ್ರಾಯದಂತೆ ಈ ಶಾಲೆಗಳು ವಾಸ್ತವವಾಗಿ ಜನರನ್ನು ಬಲಿಪಶುಗಳನ್ನಾಗಿ ಮಾಡುವ ಮತಾಂತರದ ಕೇಂದ್ರಗಳಾಗಿದ್ದವು. ಈ ಕಾರಣದಿಂದ ಈ ಕಾಲಘಟ್ಟದಲ್ಲಿ ಬಹುಶಃ ಸಾಕ್ಷರತೆಯ ಸೂಚಿ ಸ್ವಲ್ಪ ಸುಧಾರಣೆ ಆಗಿರಬಹುದು.

19ನೇ ಶತಮಾನದಲ್ಲಿ ಕೇರಳದ ಇತಿಹಾಸದಲ್ಲಿ ಸ್ಥಾಪನೆಯಾದ ಲಂಡನ್ ಮಿಶನರಿ ಸೊಸೈಟಿ ಹಾಗೂ ಈಸಾಯಿ ಮಿಶನ್ ಸೊಸೈಟಿಯ ಸ್ಥಾಪನೆ ಬಹಳ ಮಹತ್ವಪೂರ್ಣವೆನಿಸಿದೆ. ಈ ಎರಡೂ ಸಂಸ್ಥೆಗಳ ಸ್ಥಾಪನೆಯ ಉದ್ದೇಶವೇ ಮತಪರಿವರ್ತನೆ ಜಾಲಕ್ಕೆ ಸಿಕ್ಕಿಸುವ ಕೇಂದ್ರ ನಿರ್ಮಾಣ ಆಗಿತ್ತು. ಆದರೆ ಬಾಹ್ಯರೂಪದಲ್ಲಿ ಶೈಕ್ಷಣಿಕ ಹಾಗೂ ಸಾಮಾಜಿಕ ಸುಧಾರಣೆಯ ಅಗ್ರೇಸರರಾಗಿ ತೋರಿಸಿಕೊಳ್ಳುತ್ತಿದ್ದರು. ಹಿಂದು ಸಮಾಜದ ವಿಶೇಷತೆಗಳ ವಿರುದ್ಧದ ಅಭಿಯಾನ ಹಾಗೂ ಶಿಕ್ಷಣವನ್ನು ಮಾಧ್ಯಮವಾಗಿಸಿಕೊಂಡಿದ್ದವು. ಪ್ರಸ್ತುತ ಚರ್ಚ್ ಈ ಸ್ಥಿತಿಯಿಂದ ಮುಂದೆ ಹೋಗಿ ಇನ್ನೂ ಮತಾಂತರದ ಅನೇಕ ಶಸ್ತ್ರಗಳನ್ನು ಸಿದ್ಧಪಡಿಸಿಕೊಂಡಿವೆ. ಬಡವರು, ಮುಗ್ದರಾದ ಅನುಸೂಚಿತ ಜಾತಿ-ಜನಜಾತಿ, ವನವಾಸಿಗಳನ್ನು ಮೋಸಗೊಳಿಸಲು ಚರ್ಚ್‌ಗಳ ಹೆಸರನ್ನು ದೇವಾಲಯಗಳೆಂದು ಕರೆಯುತ್ತಿರುವರು. ಪಾದರಿ ಕಾವಿ ಬಟ್ಟೆ ತೊಡುವುದರ ಅಥವಾ ನನ್‌ಗಳು ಕೇಸರಿ-ಗುಲಾಬಿ ಸೀರೆಗಳನ್ನು ತೊಡಲು ಪ್ರಾರಂಭಿಸಿರುವರು. ಹಿಂದು ಪದ್ಧತಿಗಳಾದ ದೀಪ, ಆರತಿ, ಪೂಜೆ, ತಿಲಕ, ಚಂದನ, ಮುಂತಾದವುಗಳು ಹಾಗೂ ಹಿಂದೂ ದೇವ-ದೇವತೆಯರ ಕೊರಳಲ್ಲಿ ಕ್ರಾಸ್ ಹಾಕಿ ಕ್ರೈಸ್ತ ಪ್ರಚಾರವನ್ನು ನಡೆಸಿದ್ದರು.

ಈಗಂತೂ ಮಿಶನರಿ ಸಂಸ್ಥೆಗಳು ಬಹುರಾಷ್ಟ್ರೀಯ ಕಂಪನಿಗಳಂತೆ ಮಾರ್ಕೆಟಿಂಗ್ ಸೂತ್ರಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

(ಅ) ಹೊಸದಾಗಿ ಮತಾಂತರ ಆದವರು ತಮ್ಮ ಹಿಂದಿನ ಜಾತಿ ಬಾಂಧವರೊಂದಿಗೆ ಸಾಧ್ಯವಾದಷ್ಟು ಸಂಬಂಧ ಇಟ್ಟುಕೊಳ್ಳಲು ಪ್ರೋತ್ಸಾಹಿಸುತ್ತಿದ್ದರು. ಕಾರಣ ಅವರನ್ನೂ ಕೂಡ ಏಸುವಿಗಾಗಿ ಪರಿವರ್ತನೆ ಮಾಡಲು ಸಾಧ್ಯವಾಗುವುದೆಂದು.

(ಆ) ಗ್ರಾಮೀಣ ಭಾಗದ ಜನರನ್ನು ಆಕರ್ಷಿಸುವಂತಹ ಜೀವನ ಶೈಲಿಯನ್ನು ರೂಡಿಸಿಕೊಳ್ಳಲು ತಿಳಿಸುತ್ತಿದ್ದರು.

(ಇ) ಕಥೆ, ಸತ್ಸಂಗ, ಭಜನೆಯಂತಹ ಸಾಮೂಹಿಕ ಕಾರ್ಯಕ್ರಮದ ಮಾಧ್ಯಮದ ಮುಖಾಂತರವೂ ಪ್ರಯೋಗ ಮಾಡುತ್ತಿದ್ದರು.

(ಈ) ಹಿಂದೂ ಮಹಿಳೆಯರು ಧರ್ಮ ರಕ್ಷಣೆ ಪಾಲನೆ ಮಾಡುವುದರಲ್ಲಿ ಮುಖ್ಯ ಪಾತ್ರ ನಿರ್ವಹಿಸುವುದರಿಂದಾಗಿ ಅವರ ನಡುವೆ ಕೆಲಸ ಮಾಡಲು ಪ್ರಾಶಸ್ತ್ಯ ಕೊಡುತ್ತಿದ್ದರು. ಮಿಶನರಿಗಳು ಹಿಂದೂ ಮಹಿಳೆಯರ ಮಧ್ಯೆ ಪ್ರವೇಶಿಸಲು ಸಹಾಯಕವಾಗುವ ಈ ಕೆಳಗಿನ ಉಪಾಯಗಳನ್ನು ಸೂಚಿಸಿರುವರು.

- ಕ್ರೈಸ್ತ ಹಬ್ಬಗಳು ವಿಶೇಷ ದಿನಗಳಲ್ಲಿ ಅವರನ್ನು ಆಮಂತ್ರಿಸುವುದು
- ಹೊಲಿಗೆ ಹಾಗೂ ಪಾಕಶಾಸ್ತ್ರದ ತರಗತಿಗಳನ್ನು ನಡೆಸುವುದು
- ವಯಸ್ಕ ಶಿಕ್ಷಣದ ತರಗತಿಗಳನ್ನು ನಡೆಸುವುದು
- ಆಸ್ಪತ್ರೆಗಳಲ್ಲಿ ರೋಗಿಗಳ ಯೋಗಕ್ಷೇಮ ವಿಚಾರಣೆ, ಇತ್ಯಾದಿ.

ಮಿಶನರಿಗಳಿಗೆ ಮಹಿಳೆಯರಷ್ಟೇ ಅಲ್ಲದೆ ಪ್ರೌಢಶಾಲೆ ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಕೂಡ ಮತಾಂತರಗೊಳಿಸುವ ಅವಕಾಶವಿರುತ್ತದೆ. ಉದಾ:

(ಕ) ಸಂಪ್ರದಾಯಶೀಲ ಮನೆಗಳ ವಿದ್ಯಾರ್ಥಿಗಳು ಶಾಲೆ-ಕಾಲೇಜಿನಲ್ಲಿ ಜಾತ್ಯತೀತ ವಾತಾವರಣದಿಂದ ಬಂದವರಾದಲ್ಲಿ ಅವರನ್ನು ಕ್ರೈಸ್ತ ಚಟುವಟಿಕೆಗೆ ಸಂಪರ್ಕಕ್ಕೆ ಆಕರ್ಷಿಸಬಹುದು.

(ಖ) ಅನ್ಯ ಭಾಷೆ-ರಾಜ್ಯಗಳಿಂದ ವಿದ್ಯಾಭ್ಯಾಸಕ್ಕೆ ಬಂದಂತಹ ಅಪರಿಚಿತ ವಿದ್ಯಾರ್ಥಿಗಳು. ಉದಾ: ಹೈದ್ರಾಬಾದ್‌ನಲ್ಲಿ ಓದುವ ಬಂಗಾಲಿ ಅಥವಾ ಉತ್ತರ ಭಾರತದ ವಿದ್ಯಾರ್ಥಿ, ಇಂತಹ ವಿದ್ಯಾರ್ಥಿಗಳನ್ನು ಚರ್ಚ್‌ಗಳಿಗೆ ಪ್ರವಾಸಗಳಿಗೆ

**ಜನಸಂಖ್ಯಾ ಅಸಂತುಲನಕ್ಕೆ ಮತಾಂತರ ಬಹು ದೊಡ್ಡ ಕಾರಣವಾಗಿದೆ. ಕ್ರೈಸ್ತ ಮಿಶನರಿಗಳ ಎಲ್ಲಾ ಚಟುವಟಿಕೆಗಳ ಮುಖ್ಯ ಉದ್ದೇಶ್ಯ ಮತಾಂತರ ಆಗಿದೆ. ಈ ಸಂಬಂಧ ಮಹಾತ್ಮಾ ಗಾಂಧೀಜಿಯವರ ಹೇಳಿಕೆ ಮಹತ್ವಪೂರ್ಣವೆನಿಸಿದೆ – 'ಸಾಮಾಜಿಕ ಸೇವೆಯ ಮುಸುಕಿನಲ್ಲಿ ಮತಾಂತರ ಮಾಡುವುದನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ ವಾಸ್ತವಿಕವಾಗಿ ಸೇವೆಯೇ ಅಲ್ಲಾ; ಉಳಿದ ಉದ್ಯೋಗಗಳಂತೆ ಮತಾಂತರವೂ ಒಂದು ದಂಧೆಯಾಗಿದೆ. ನನಗೆ ಸ್ಮರಣೆಯಿರುವಂತೆ ನಾನೊಮ್ಮೆ ಒಬ್ಬ ಪಾದ್ರಿಯ ವರದಿಯನ್ನು ಓದಿದೆ. ಆದರಲ್ಲಿ ಮತಾಂತರಕ್ಕೆ ಆದ ವೆಚ್ಚದ ಲೆಕ್ಕದ ಜೊತೆಗೆ ಹೊಸ ವರ್ಷದ ಬೆಳೆ (ಮತಾಂತರ) ತೆಗೆಯಲು ಬಜೆಟ್‌ನ್ನು ಕೊಡಲಾಗಿತ್ತು' (12.6.1937 ಗಾಂಧೀಜಿ)**